

## ಅಮೀರ್ ಬೆತ್ತಲೆ

ಗೌರವವನ್ನು ಉಳಿಸಿಕೊಂಡ ಸ್ಟಾರ್‌ಗಳು ತಿಕ್ಕಲು ಥರ ಆಡಿದರೆ ಹೇಗನ್ನಿಸುತ್ತದೆ? ಸದ್ಯಕ್ಕೆ ಅಮೀರ್‌ಖಾನ್ ಬಗ್ಗೆಯೂ ಇಂತಹದ್ದೇ ಮಾತುಗಳು ಕೇಳಿ ಬರುತ್ತಿವೆ. 'ಪಿಕೆ' ಎನ್ನುವ ಇನಿಷಿಯಲ್ ಅನ್ನೇ ಸಿನಿಮಾ ಟೈಟಲ್ ಆಗಿಸಿರುವ ನಿರ್ದೇಶಕ ರಾಜ್‌ಕುಮಾರ್ ಹಿರಾನಿ, ಚಿತ್ರದ ಹೀರೊ ಅಮೀರ್‌ಖಾನ್‌ನ ಬೆತ್ತಲೆ ಪೋಸ್ಟರ್ ಪ್ರಕಟಿಸಿರುವುದು ಎಲ್ಲೆಡೆ ಚರ್ಚೆಗೆ ಗ್ರಾಸ ಒದಗಿಸಿದೆ.

ರೇಡಿಯೋ ಒಂದನ್ನು ಮಾತ್ರ ಸೊಂಟಕ್ಕೆ ಅಡ್ಡ ಇಟ್ಟುಕೊಂಡಿರುವ ಅಮೀರ್ ಉಳಿದಂತೆ ಪೂರಾ ಬೆತ್ತಲೆ ನಿಂತಿರುವುದು 'ಪಿಕೆ' ಚಿತ್ರದ ಕುರಿತು ಕುತೂಹಲವನ್ನೂ ಹೆಚ್ಚಿಸಿದೆ. ಆದರೆ ಈ ಚಿತ್ರ ನೋಡಿ ಮುಜುಗರ ಅನುಭವಿಸಿದ ಹಲವರು ಕೋರ್ಟ್ ಮೆಟ್ಟಿಲು ಹತ್ತಿದ್ದಾರೆ. ಸುಪ್ರೀಂಕೋರ್ಟ್‌ನಲ್ಲಿ ಈ ಚಿತ್ರ ಧಾರ್ಮಿಕ ಭಾವನೆಗಳನ್ನು ನೋಯಿಸಿದೆ ಎಂದು ತನಿಖೆಗೆ ಬಂದ ಪಿಐಎಲ್ ಅನ್ನು ನ್ಯಾಯಾಧೀಶರು ತಿರಸ್ಕರಿಸಿದ್ದಾರೆ. 'ಸಿನಿಮಾ ಎನ್ನುವುದು ಕಲೆ. ಈ ಸೃಜನಶೀಲ ಕೆಲಸಕ್ಕೆ ಧರ್ಮವನ್ನು ಎಳೆದು ತರಬೇಡಿ' ಎಂದು ಗದರಿಸಿದ್ದಾರೆ. ಆದರೆ ಜಬಲ್ಪುರ ಸ್ಥಳೀಯ ಕೋರ್ಟಿನಲ್ಲಿ ಸಲ್ಲಿಸಲಾದ ಅರ್ಜಿಯನ್ನು ಪರಿಗಣಿಸಿದ ನ್ಯಾಯಾಧೀಶರು, ಅಮೀರ್‌ಖಾನ್ ಮತ್ತು ಹಿರಾನಿಗೆ ನೋಟಿಸ್ ನೀಡಿದ್ದಾರೆ. ಈ ಬೆತ್ತಲೆ ಚಿತ್ರವನ್ನು ಪ್ರಕಟಿಸಿದ ಪತ್ರಿಕೆಗಳ ಸಂಪಾದಕರಿಗೂ, ಟಿವಿ ಅಸೋಸಿಯೇಶನ್ ಅಧ್ಯಕ್ಷ ಮುಖೇಶ್ ಭಟ್‌ಗೂ ನೋಟಿಸ್ ಹೋಗಿದೆ.

'ಪಿಕೆ' ಚಿತ್ರದ ಒಟ್ಟು 8 ಪೋಸ್ಟರ್‌ಗಳನ್ನು ಬಿಡುಗಡೆ ಮಾಡಿ ಕುತೂಹಲ ಹೆಚ್ಚಿಸುವುದು ನಿರ್ದೇಶಕರ ತಂತ್ರವಂತೆ. ಎರಡನೇ ಪೋಸ್ಟರ್ ಕೂಡಾ ಬಿಡುಗಡೆಯಾಗಿದ್ದು ಅದರಲ್ಲಿ ಅಮೀರ್‌ಖಾನ್ ಮೈತುಂಬ ರಾಜಸ್ಥಾನಿ ಕಲಾವಿದರ ಡ್ರೆಸ್ ಹಾಕಿಕೊಂಡಿದ್ದು, ಬ್ರಾಸ್‌ಬ್ಯಾಂಡ್ ವಾದ್ಯವೊಂದನ್ನು ಊದುತ್ತಿದ್ದಾನೆ. 2-3 ವಾರಕ್ಕೊಮ್ಮೆ ಹೊಸ ಪೋಸ್ಟರ್‌ಗಳನ್ನು ಬಿಡುಗಡೆ ಮಾಡಿ ಕೊನೆಯಲ್ಲಿ ಪಿಕೆ ಎಂದರೆ ಯಾರು ಎನ್ನುವುದನ್ನು ನಿರ್ದೇಶಕರು ತಿಳಿಸುತ್ತಾರಂತೆ. 'ತ್ರೀ ಈಡಿಯಟ್ಸ್'ನಂತಹ ಅತ್ಯುತ್ತಮ ಸಿನಿಮಾ ಮೂಲಕ ಸುದ್ದಿ ಮಾಡಿದ ಅಮೀರ್- ಹಿರಾನಿ ಜೋಡಿ, ಪಿಕೆ ಮೂಲಕ ಏನನ್ನು ಹೇಳಹೊರಟಿದೆ ಎನ್ನುವುದು ಇನ್ನೂ ಸಸ್ಪೆನ್ಸ್. 'ಬೆತ್ತಲೆ ಪೋಸ್ಟರ್‌ನಲ್ಲಿ ವಿಶೇಷ ಏನಿಲ್ಲ. ಅದನ್ನೊಂದು ಕಲಾಕೃತಿ ಎಂದು ಪರಿಗಣಿಸಬೇಕು. ಈ ಚಿತ್ರ ನನ್ನ ಜೀವಮಾನದಲ್ಲೇ ಅತ್ಯುತ್ತಮ ಚಿತ್ರವಾಗಲಿದೆ' ಎಂದು ಅಮೀರ್ ಸಮರ್ಥನೆ ಮಾಡಿಕೊಂಡಿದ್ದಾರೆ. ಆದರೆ ಅಮೀರ್‌ನ ಬಹುತೇಕ ಅಭಿಮಾನಿಗಳು ಇದನ್ನು ತಿಕ್ಕಲುತನವೆಂದೇ ಕಿಡಿ ಕಾರಿದ್ದಾರೆ. ಅಮೀರ್‌ನಂತಹ ಅತ್ಯುತ್ತಮ ನಟನಿಗೂ ಗಿಮಿಕ್‌ನ ಅಗತ್ಯವಿದೆಯೆ ಎನ್ನುವುದು ಗಂಭೀರ ಪ್ರಶ್ನೆಯೇ.



## ಫೆಡರರ್ ನಾಗಾಲೋಟ

'ಸ್ಟಾರ್' ಆದವರು ಗೌರವವನ್ನು ಉಳಿಸಿಕೊಳ್ಳುವುದು ಕಡಿಮೆ. ಗೌರವ ಮತ್ತು ಜನಪ್ರಿಯತೆ ಎರಡರಲ್ಲೂ ಮುಂಚೂಣಿಯಲ್ಲಿರುವ ಟೆನಿಸ್ ಆಟಗಾರ ರೋಜರ್ ಫೆಡರರ್. ಅಮೆರಿಕ ಓಪನ್ ಟೆನಿಸ್‌ನಲ್ಲಿ ಈ ಸಲ ಮತ್ತೆ ಚಾಂಪಿಯನ್ ಆಗುವ ಎಲ್ಲ ನಿರೀಕ್ಷೆಗಳನ್ನೂ ಹುಟ್ಟಿಸಿದ್ದಾರೆ. ಸದ್ಯಕ್ಕೆ ಎಟಿಪಿ ರಾಂಕಿಂಗ್‌ನಲ್ಲಿ 3ನೇ ಸ್ಥಾನದಲ್ಲಿರುವ ಫೆಡರರ್‌ಗೆ ದೊಡ್ಡ ಭಯ ಇರುವುದು ರಫಾ ನಾಡೆಲ್‌ನದ್ದು. ಈ ಇಬ್ಬರ ನಡುವಣ ಒಟ್ಟು 33 ಮುಖಾಮುಖಿಗಳಲ್ಲಿ 23 ಸಲ ರಫಾ ಅವರೇ ಗೆದ್ದಿದ್ದಾರೆ. ಆದರೆ ಈ ಸಲ ಮುಂಗೈ ಮಣಿಕಟ್ಟಿನ ಗಾಯದಿಂದಾಗಿ ರಫಾ ಆಡುತ್ತಿಲ್ಲ. ಇನ್ನೊಬ್ಬ ಪ್ರಬಲ ಪ್ರತಿಸ್ಪರ್ಧಿ ಆ್ಯಂಡಿ ಮುರ್ರೆ ಬೆನ್ನಿನ ಸರ್ಜರಿ ಬಳಿಕ ಸರಿಯಾಗಿ ಚೇತರಿಸಿ ಕೊಂಡಿಲ್ಲ. ಹಾಗಾಗಿ ಫೆಡರರ್ ಮತ್ತು ಜೊಕೊವಿಕ್ ಯುಎಸ್ ಫೈನಲ್ ತಲುಪುವ ಮೆಚ್ಚಿನ ಸ್ಪರ್ಧಿಗಳು.

ಹಾಗೆ ನೋಡಿದರೆ ಫೆಡರರ್ ಕೂಡಾ ಗಾಯಾಳುವೇ. 2013ರಲ್ಲಿ ಬೆನ್ನುನೋವಿನಿಂದ ನರಳಿ, ನಿವೃತ್ತಿಯ ಸುದ್ದಿಯೂ ಹಬ್ಬಿತ್ತು. ಆದರೆ ಫೀನಿಕ್ಸ್‌ನಂತೆ ಮೇಲೇಳುವುದು ಫೆಡರರ್‌ಗೆ ಕರಗತ. ಈವರೆಗೆ ಒಟ್ಟು 17 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದುಕೊಂಡಿರುವ ಫೆಡರರ್, ದಾಖಲೆ ಪುಸ್ತಕದಲ್ಲೂ ಮುಂಚೂಣಿಯಲ್ಲಿದ್ದಾರೆ. ಬೇರೆ ಯಾವುದೇ ಆಟಗಾರನಿಗಿಂತ 3 ಹೆಚ್ಚು ಗ್ರ್ಯಾನ್‌ಸ್ಲಾಮ್‌ಗಳನ್ನು ಗೆದ್ದಿರುವ ಅವರು ಅತ್ಯಂತ ಹೆಚ್ಚು ಸಲ (25) ಪುರುಷರ ಸಿಂಗಲ್ಸ್ ಗ್ರ್ಯಾನ್‌ಸ್ಲಾಮ್ ತಲುಪಿದ್ದೂ ದಾಖಲೆಯೇ. 2004ರಲ್ಲಿ ಎಟಿಪಿ ರಾಂಕಿಂಗ್‌ನಲ್ಲಿ 'ನಂಬರ್ ಒನ್' ಇದ್ದ ಅವರು, ಇನ್ನೊಮ್ಮೆ ಆ ಸ್ಥಾನಕ್ಕೆ ಏರುವುದನ್ನೂ ತಳ್ಳಿಹಾಕಲಾಗದು. 33ರ ಹರೆಯದಲ್ಲಿ (ಬರ್ತ್‌ಡೇ 8/8/1981) ಹೀಗೆ ನಿರಂತರ ಟೆನಿಸ್ ಆಡುವುದೇ ಒಂದು ಪವಾಡ. ಈ ಸಲ ಯುಎಸ್ ಓಪನ್ ಗೆದ್ದರೆ 6ನೆ ಸಲ ಗೆದ್ದಂತಾಗಿ ಜಿಮ್ಮಿ ಕಾನರ್ಸ್ ಮತ್ತು ಪೀಟ್ ಸಾಂಪ್ರಾಸ್ ದಾಖಲೆಯನ್ನು ಸರಿಗಟ್ಟಿದಂತಾಗುತ್ತದೆ. ಟೆನಿಸ್‌ನಲ್ಲಿ ಆಟದ ಒತ್ತಡದಲ್ಲಿ ಎಂತಹ ಸ್ಟಾರ್ ಆಟಗಾರರಾದರೂ 'ಡಬಲ್ ಫಾಲ್ಟ್' ಮಾಡುವುದು ಸಾಮಾನ್ಯ. ಫೆಡರರ್ ನಿಜ ಜೀವನದಲ್ಲಿಯೂ ಎರಡು ಜೋಡಿ, ಅವಳಿ ಮಕ್ಕಳನ್ನು ಹೊಂದಿರುವ ಡಬಲ್ ಫಾಲ್ಟಿಗ! 2003ರಿಂದ 2013ರವರೆಗೆ ಸತತವಾಗಿ 'ಎಟಿಪಿ ಫ್ಯಾನ್ಸ್ ಅವಾರ್ಡ್' ಗೆದ್ದಿರುವುದೂ ಒಂದು ದಾಖಲೆಯೇ.

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65